# ಆ್ಯಪಲ್‌ಗೆ 6G ರಂಗು



■ **ಶಶಿಕುಮಾರ್ ಸಿ.**

ಕಳೆದೆರಡು ವರ್ಷಗಳಿಂದ ಟೆಕ್ ವಲಯದಲ್ಲಿ ಸದ್ದು ಮಾಡುತ್ತಿರುವ '5ಜಿ' ತಂತ್ರಜ್ಞಾನವು ಇನ್ನೂ ದೇಶದೆಲ್ಲೆಡೆ ವ್ಯಾಪಿಸುವ ಮುನ್ನವೇ ಆ್ಯಪಲ್ ಕಂಪನಿ, ವೈರ್‌ಲೆಸ್ ಸಿಸ್ಟಂ ರಿಸರ್ಚ್ ಇಂಜಿನಿಯರ್ಸ್ ನೇಮಕಕ್ಕೆ ಮುಂದಾಗಿದ್ದು, ಶೀಘ್ರದಲ್ಲೇ '6G' ತಂತ್ರಜ್ಞಾನವನ್ನು ಪರಿಚಯಿಸಲಿದೆ. ಈ ಮಾಹಿತಿಯನ್ನು ಕಂಪನಿಯೇ ಅಧಿಕೃತವಾಗಿ ಪ್ರಕಟಿಸಿದೆ. ಸ್ಮಾರ್ಟ್‌ಫೋನ್ ಕಂಪನಿಗಳು ಇನ್ನೂ 5ಜಿ ತಂತ್ರಜ್ಞಾನಕ್ಕೆ ನಿಖರವಾಗಿ ಹೊಂದಿಕೊಳ್ಳಲು ಪರದಾಡುತ್ತಿರುವ ಸಮಯದಲ್ಲಿ ಆ್ಯಪಲ್ ಕಂಪನಿಯ ದಿಟ್ಟ ನಿಲುವು ಎಲ್ಲರಿಗೂ ಅಚ್ಚರಿ ಮೂಡಿಸಿದೆ.

'ಆ್ಯಪಲ್ ಇನ್ನು ಮುಂದೆ ಹೊರತರುವ ತನ್ನೆಲ್ಲ ಫೋನ್‌ಗಳಲ್ಲಿ 5ಜಿ ತಂತ್ರಜ್ಞಾನದ ಸೆಲ್ಯುಲರ್ ಕನೆಕ್ಟಿವಿಟಿ ತಂತ್ರಾಂಶವನ್ನು ಅಳವಡಿಸಲು ಸಜ್ಜಾಗುತ್ತಿದೆ. 5ಜಿ ಹಾಗೂ 6ಜಿ ನೆಟ್‌ವರ್ಕ್‌ಗೆ ಸಂಬಂಧಪಟ್ಟಂತೆ ವೈರ್‌ಲೆಸ್ ಸಿಸ್ಟಂ ಸಂಶೋಧನಾ ಎಂಜಿನಿಯರ್‌ಗಳನ್ನು ನೇಮಕ ಮಾಡಿಕೊಳ್ಳಲಿದ್ದೇವೆ. ನೇಮಕಗೊಳ್ಳುವ ಸಿಬ್ಬಂದಿಯು ಸಿಲಿಕಾನ್ ವ್ಯಾಲಿ ಹಾಗೂ ಸ್ಯಾನ್ ಡಿಗೊದಲ್ಲಿನ ಆ್ಯಪಲ್ ಕಚೇರಿಗಳಲ್ಲಿ ಕಾರ್ಯ ನಿರ್ವಹಿಸಬೇಕಿದೆ. ಮಾಹಿತಿ ಮತ್ತು ಸಂಹವನ ತಂತ್ರಜ್ಞಾನ ಕ್ಷೇತ್ರದಲ್ಲಿ ಗ್ರಾಹಕರಿಗೆ ಇನ್ನಷ್ಟು ಆಕರ್ಷಕ ಆ್ಯಪಲ್ ಉತ್ಪನ್ನಗಳನ್ನು ಒದಗಿಸುವುದು ನಮ್ಮ ಗುರಿಯಾಗಿದೆ. ಹೀಗಾಗಿ ಈ ಕ್ಷೇತ್ರದಲ್ಲಿ ನಿಮಗೆ ಪರಿಣತಿ ಮತ್ತು ಉತ್ಸಾಹವಿದ್ದರೆ, ಅರ್ಜಿ ಸಲ್ಲಿಸಬಹುದು' ಎಂದು ಆ್ಯಪಲ್ ಉದ್ಯೋಗದ ಕುರಿತ ಪೋಸ್ಟ್ ಹೇಳಿದೆ.

ಕಂಪನಿಯ ಉದ್ಯೋಗ ಪ್ರಕಟಣೆಯ ಪ್ರಕಾರ, 'ಮುಂದಿನ ಜನರೇಷನ್‌ನ ವೈರ್‌ಲೆಸ್ ತಂತ್ರಜ್ಞಾನವು ಆವಿಷ್ಕಾರದ ಅನನ್ಯ ಹಾಗೂ ಲಾಭದಾಯಕ ಅವಕಾಶಗಳು ಮುಂಬರುವ ಆ್ಯಪಲ್ ಕಂಪನಿಯ ಉತ್ಪನ್ನಗಳ ಮೇಲೆ ಆಳವಾದ ಪರಿಣಾಮವನ್ನು ಬೀರಲಿವೆ. ರೇಡಿಯೊ ಪ್ರವೇಶ ತಂತ್ರಜ್ಞಾನಗಳನ್ನು ರಚಿಸುವ ಜವಾಬ್ದಾರಿಯುತ ಅತ್ಯಾಧುನಿಕ ಸಂಶೋಧನಾ ಗುಂಪಿನ ಕೇಂದ್ರಬಿಂದುವಾಗಿ ಮುಂದಿನ ಪೀಳಿಗೆಯು ಇರಲಿದೆ.'

ಕೆಲ ತಿಂಗಳುಗಳ ಹಿಂದಷ್ಟೇ 5ಜಿ ತಂತ್ರಜ್ಞಾನ ಅಳವಡಿಕೆಯ ಮೊದಲ ಆ್ಯಪಲ್ ಫೋನ್ ಅನ್ನು ಬಿಡುಗಡೆ ಮಾಡಲಾಗಿತ್ತು. ಜಾಗತಿಕವಾಗಿ 5G ತಂತ್ರಜ್ಞಾನ ಕಳೆದ ಎರಡು ವರ್ಷಗಳಿಂದಷ್ಟೇ ಸದ್ದು ಮಾಡುತ್ತಿದೆ. ಅಲ್ಲದೆ, ಪ್ರಸ್ತುತ 5G ಮೊಬೈಲ್ ಮತ್ತು ಇತರ ಡಿವೈಸ್‌ಗಳು 5Gbps ನಿಂದ 10Gbps ವರೆಗೆ ವೇಗದ ಇಂಟರ್‌ನೆಟ್ ಒದಗಿಸುತ್ತಿವೆ. ಜತೆಗೆ ಆ್ಯಪಲ್ ಇತ್ತೀಚೆಗಷ್ಟೇ 5G ತಂತ್ರಜ್ಞಾನ ಬೆಂಬಲಿತ ಐಫೋನ್ ಸರಣಿ ಬಿಡುಗಡೆ ಮಾಡಿತ್ತು.

ಅದರ ಬೆನ್ನಲ್ಲೇ ಆ್ಯಪಲ್ ಹೊಸ ಜಾಬ್ ಪೋಸ್ಟಿಂಗ್ ಮಾಡಿರುವುದು ಮುಂದೆ 5G ಮತ್ತು 6G ತಂತ್ರಜ್ಞಾನ ಅಳವಡಿಸಲು, ತನ್ನದೇ ಸ್ವಂತ ಚಿಪ್ ಅಭಿವೃದ್ಧಿಪಡಿಸಲು ಮುಂದಾಗಿದೆ ಎನ್ನಲಾಗಿದೆ. ಅದಕ್ಕೆ ಪೂರಕವಾಗಿ ಆ್ಯಪಲ್, ಕ್ವಾಲ್ಕಂ ಜತೆಗಿನ ಚಿಪ್ ಮತ್ತು ಮೋಡೆಮ್ ಪೂರೈಕೆ ಒಪ್ಪಂದವನ್ನು ಸ್ಥಗಿತಗೊಳಿಸಿದ್ದು, ಇಂಟೆಲ್ ಜತೆ ಸ್ಮಾರ್ಟ್‌ಫೋನ್ ಮೋಡೆಮ್ ಉದ್ಯಮದಲ್ಲಿ ಹೂಡಿಕೆ ಮಾಡಿದೆ. ಜತೆಗೆ 17,000ಕ್ಕೂ ಅಧಿಕ ವೈರ್‌ಲೆಸ್ ಟೆಕ್ನಾಲಜಿ ಪೇಟೆಂಟ್‌ಗಳನ್ನು ತನ್ನದಾಗಿಸಿಕೊಳ್ಳುತ್ತಿದೆ. ಕಳೆದ ವರ್ಷವಷ್ಟೇ ಆ್ಯಪಲ್ ಕಂಪನಿಯು, ಆ್ಯಪಲ್ 6ಜಿ ಮತ್ತು ಇತರ ಮುಂದಿನ ಪೀಳಿಗೆಯ ಸೆಲ್ಯುಲಾರ್ ತಂತ್ರಜ್ಞಾನಗಳ ಮಾನದಂಡಗಳ ಮೇಲೆ ಕೆಲಸ ಮಾಡುವ ಕಂಪನಿಗಳ ಮೈತ್ರಿಕೂಟವನ್ನು ಸೇರಿದೆ. 5ಜಿಗಿಂತಲೂ ನೂರು ಪಟ್ಟು ವೇಗದ ಕಾರ್ಯಕ್ಷಮತೆಯನ್ನು 6ಜಿ ತಂತ್ರಜ್ಞಾನವು ಒದಗಿಸಲಿದೆ ಎಂಬುದು ತಜ್ಞರ ವ್ಯಾಖ್ಯಾನ. ■

# ಬರಬಹುದೇ ಫೇಸ್‌ಬುಕ್ ವಾಚ್!



ಜಗತ್ತಿನ ಅತ್ಯಂತ ಪ್ರಭಾವಿತ ಸಾಮಾಜಿಕ ಜಾಲತಾಣವಾದ ಫೇಸ್‌ಬುಕ್ ಸಂಸ್ಥೆಯು ಹಾರ್ಡ್‌ವೇರ್ ಕ್ಷೇತ್ರಕ್ಕೆ ಕಾಲಿಟ್ಟಿರುವ ಫೇಸ್‌ಬುಕ್ 'ಸ್ಮಾರ್ಟ್ ವಾಚ್' ಅಭಿವೃದ್ಧಿಯಲ್ಲಿ ತೊಡಗಿದೆ ಎನ್ನಲಾಗಿದೆ. ಈ ವಾಚ್‌ನಲ್ಲಿ ಮೆಸೇಜ್ ಕಳುಹಿಸುವ ತಂತ್ರಜ್ಞಾನದ ಜೊತೆಗೆ ಆರೋಗ್ಯ ಮತ್ತು ಫಿಟ್‌ನೆಸ್ ಬಗ್ಗೆ ಕಾಳಜಿ ವಹಿಸುವ ಫೀಚರ್‌ಗಳು ಇರಲಿವೆ.

'ಫೇಸ್‌ಬುಕ್ ಸ್ಮಾರ್ಟ್ ವಾಚ್ ಬಗ್ಗೆ ಸಂಸ್ಥೆಯು ಈವರೆಗೆ ಯಾವುದೇ ಸುಳಿವನ್ನು ಬಿಟ್ಟುಕೊಟ್ಟಿಲ್ಲ. ಗೋಪ್ಯವಾಗಿಯೇ ಈ ಸ್ಮಾರ್ಟ್ ವಾಚ್ ಅಭಿವೃದ್ಧಿಯ ಕಾರ್ಯದಲ್ಲಿ ತೊಡಗಿದೆ. ಮುಂದಿನ ವರ್ಷ ಈ ಸಾಧನದ ಮಾರಾಟ ಆರಂಭಕ್ಕೆ ಫೇಸ್‌ಬುಕ್ ಯೋಜಿಸಿದೆ' ಎಂದು ರಾಯಿಟರ್ಸ್ ವರದಿ ಮಾಡಿದೆ.

ಆ್ಯಪಲ್ ಮತ್ತು ಹುವಾವೇ ಪ್ರಾಬಲ್ಯವಿರುವ ಸ್ಮಾರ್ಟ್ ವಾಚ್ ಮಾರುಕಟ್ಟೆಗೆ ಫೇಸ್‌ಬುಕ್ ಸಾಧನದ ಪ್ರವೇಶ ವಿಚಾರವು ಅತ್ಯಂತ ಮಹತ್ವ ಪಡೆದುಕೊಂಡಿದೆ. ಫೇಸ್‌ಬುಕ್‌ನ ಉದ್ದೇಶಿತ ಸ್ಮಾರ್ಟ್‌ವಾಚ್ ಸೆಲ್ಯುಲಾರ್ ಸಂಪರ್ಕ ತಂತ್ರಜ್ಞಾನದ ಮೂಲಕ ಕಾರ್ಯ ನಿರ್ವಹಿಸಲಿದೆ. ಬಳಕೆದಾರರಿಗೆ ಅದರ ಸೇವೆಗಳ ಮೂಲಕ ಸಂದೇಶಗಳನ್ನು ಕಳುಹಿಸಲಿದೆ. ಆರೋಗ್ಯ ಮತ್ತು ಫಿಟ್‌ನೆಸ್ ಕಂಪನಿಗಳಾದ ಪೆಲೋಟಾನ್ ಇಂಟರ್‌ಯಾಕ್ಟಿವ್‌ನಂತಹ ಸೇವೆಗಳು ಅಥವಾ ಹಾರ್ಡ್‌ವೇರ್‌ಗಳಿಗೆ ಸಂಪರ್ಕ ಕಲ್ಪಿಸುತ್ತದೆ ಎನ್ನಲಾಗಿದೆ.

ಫೇಸ್‌ಬುಕ್ ಇತ್ತೀಚಿನ ವರ್ಷಗಳಲ್ಲಿ ಹಾರ್ಡ್‌ವೇರ್ ಕ್ಷೇತ್ರಕ್ಕೆ ಕಾಲಿಡುತ್ತಿದೆ, ವರ್ಚುವಲ್ ರಿಯಾಲಿಟಿ ಹೆಡ್‌ಸೆಟ್ ಆಕ್ಯುಲಸ್ ಮತ್ತು ವಿಡಿಯೋ ಚಾಟಿಂಗ್ ಡಿವೈಸ್ ಪೋರ್ಟಲ್ ಸೇರಿದಂತೆ ಉತ್ಪನ್ನಗಳೊಂದಿಗೆ ಈಗಾಗಲೇ ಅದು ಹಾರ್ಡ್‌ವೇರ್ ಕ್ಷೇತ್ರಕ್ಕೆ ಕಾಲಿಟ್ಟಿದೆ. ■